ವಿಜಯಕುಮಾರ್ ಎಚ್.ಕೆ. ರಾಯಚೂರು

ಮುಕ್ತಿಗಾಗಿ ಕಲ್ಲುದೇವರನ್ನು ಪೂಜಿಸಲೋ ಫೋಟೊದಲ್ಲಿರುವ ದೇವರನ್ನು ಪೂಜಿಸಲೋ?



ಮುಕ್ತಿಯಷ್ಟೇ ಅಲ್ಲವೇ – ಹೆದ್ದಾರಿಯ ಮಧ್ಯದಲ್ಲಿ ವಾಕ್ ಮಾಡಿದರೆ ಸಾಕು.

ವಿ. ಹೇಮಂತಕುಮಾರ್, ಬೆಂಗಳೂರು

ಅವಳ ಮೂಗುತಿಯ ಮಿಂಚು ಕಣ್ಣು ಕುಕ್ಕುತ್ತಿದೆಯಲ್ಲ?

ಅವಳ ಕಣ್ಣುಗಳೊಡನೆ ಮೂಗುತಿ ಸ್ಪರ್ಧೆಗಿಳಿದಿರುವುದೇ ಕಾರಣವಂತೆ.

ಪಿ. ಜಯವಂತ ಪೈ, ಕುಂದಾಪುರ

ಬ್ಯೂಟಿ ಪಾರ್ಲರ್‌ಗೂ ಸಲೂನ್‌ಗೂ ವ್ಯತ್ಯಾಸವೇನು?

ಸಲೂನ್‌ನಲ್ಲಿ ಕೂದಲಿಗೆ ಕತ್ತರಿ ಹೆಚ್ಚು; ಬ್ಯೂಟಿ ಪಾರ್ಲರಲ್ಲಿ ಜೇಬಿಗೆ ಕತ್ತರಿ ಹೆಚ್ಚು.

ಬಿ.ಆರ್. ಉಷಾ, ಕೆನಡಾ

ಮದುವೆಯಾದ ಮೇಲೆ ಹೆಣ್ಣೇ ಏಕೆ ಗಂಡನ ಮನೆಗೆ ಹೋಗಬೇಕು?



ಪಶುಗಳ ನೆಲೆಗೇ ನುಗ್ಗಿ ಎದುರಿಸಿ ಪಳಗಿಸುವುದು ಬೇಟೆಯ ನಿಯಮ.

ಮಲ್ಲಿಕಾರ್ಜುನ, ಸುರಧೇನುಪುರ

ಕಳ್ಳರಿದ್ದಾರೆ ಎಚ್ಚರಿಕೆ ಅಂತ ಪೊಲೀಸರೇ ಪ್ರಚಾರ ಮಾಡೋ ಕಾಲ ಬಂತಲ್ಲ?

ಪೇದೆಗಳನ್ನೆಲ್ಲ ಕಳ್ಳರ, ಮುಖಂಡರ ಕಾವಲಿಗಿಟ್ಟರೆ ಜನಕ್ಕಾಗಿ ಇಷ್ಟಾದರೂ ಮಾಡಬೇಕಲ್ಲ.

ಐಶ್ವರ್ಯ ನಾಗರಾಜ್, ಹಿರೇಹಡಗಲಿ

ಸೀನಿಯರ್‌ಗೂ ಜೂನಿಯರ್‌ಗೂ ಇರುವ ವ್ಯತ್ಯಾಸವೇನು?

ಸೀನಿಯರ್‌ಗೆ ದೂರದ್ದು ಕಾಣಲ್ಲ.

ಕೆ. ಪುರುಷೋತ್ತಮ ರೆಡ್ಡಿ, ಪಾವಗಡ

ನಗ್ನ ಮನುಜ ಬಟ್ಟೆ ಧರಿಸಿ ನಾಗರಿಕನಾದ. ಈಗ ಅಲ್ಪವಸ್ತ್ರ, ಕಾಮಪೋಷಣೆಯೇ ಹಕ್ಕು, ಅಭಿರುಚಿ. ಯಾವುದು ನೇಮ?

ಥಾನುವಸ್ತ್ರದ ಸ್ವಾಮೀಜಿ ಕಾಮಿಯಾದ; ನಿರ್ವಸ್ತ್ರ ಅಕ್ಕ ಶರಣೆಯಾದಳು. ಮನೋನಿಗ್ರಹವೊಂದೇ ನೇಮ.

ಮಂಡಿ ಕುಮಾರ್, ಬೆಂಗಳೂರು

ಪೂಜಿಸುವ ದೇವರ ಪಟವನ್ನು ಕೆಲವರು ರಸ್ತೆಬದಿ ಇಡುತ್ತಾರೆ. ಏಕೆ?

ದೇವನಿಗೇ ದಾರಿ ತೋರಿಸುವ ಯತ್ನ!

ರತ್ನಜ, ಮೈಸೂರು

ಹೆಂಡತಿಯನ್ನು 'ಧರ್ಮಪತ್ನಿ' ಎಂದು ಕರೆಯುತ್ತಾರೆ. ಗಂಡನನ್ನು 'ಧರ್ಮಪತಿ' ಎನ್ನರೇಕೆ?

'ಧರ್ಮರಾಯ'ನಿಂದ ದ್ರೌಪದಿ ಅನುಭವಿಸಿದ್ದನ್ನು ಕಂಡು ಧರ್ಮಕ್ಕೂ ಪತಿಗೂ ದೂರವೇ ಸರಿಯೆನಿಸಿತಂತೆ.

ಮಧು ಹೆಚ್.ಡಿ., ಹಾಸನ

ಒಳ್ಳೆಯವರಿಗೆ ಕಾಲ ಇಲ್ಲವೆಂದು ಎಲ್ಲರೂ ಹೇಳುವರಲ್ಲ, ಹಾಗಾದರೆ ಕೆಟ್ಟವರು ಯಾರು?

ತಾನು ಒಳ್ಳೆಯವನೆಂದು ಸ್ವಯಂ ಘೋಷಿಸಿಕೊಳ್ಳುವವನಿಗಿಂತ ಕೆಟ್ಟವನಿಲ್ಲವೀ ಜಗದೊಳ್.

ಅನಸೂಯ ಟಿ, ಕೇದಿಗೆಮನೆ

ಶಂಖ, ಜಾಗಟೆಗಳ ಶಬ್ದಕ್ಕೆ ಭೂತ, ಪ್ರೇತಗಳು ಓಡಿಹೋಗುತ್ತವಂತೆ. ಇದು ನಿಜವೆ?

ನಿಜ. ಅವಕ್ಕೆ ಸೌಂಡ್ ಅಲರ್ಜಿ ಇರುವುದರಿಂದಲೇ ಸದ್ದಿಲ್ಲದ ಭೂತಬಂಗಲೆಗಳಲ್ಲಿ ವಾಸಿಸುವುದು.

ಅನಂತಪದ್ಮನಾಭ ಎಚ್.ಎಮ್., ಬೆಂಗಳೂರು

ಸನ್ ಕೆಳಗೆ ನಿಂತರೆ ವಿಟಮಿನ್ 'ಡಿ' ಸಿಗುವಂತೆ ಮೂನ್ ಕೆಳಗೆ ನಿಂತರೆ ವಿಟಮಿನ್ 'ಎಂ' (ಮನಿ) ಏಕೆ ಸಿಗುವುದಿಲ್ಲ?

ಕುಡುಕರ ಬಾಯಿವಾಸನೆ ಪರೀಕ್ಷಿಸುವ ಪೇದೆಯಾಗಿ ನಿಲ್ಲಿ; ಎಂ ಜೊತೆಗೆ ವಿ (ವಾಸನೆ) ವಿಟಮಿನ್ನೂ ದೊರೆಯುತ್ತದೆ.

## ವಾರದ ಪ್ರಶ್ನೆ

ಹೆಚ್.ವಿ. ಶ್ರೀಧರ್, ಬೆಂಗಳೂರು

ಮಂತ್ರಿಗಳನ್ನು ಆಯ್ಕೆ ಮಾಡುವಾಗ ಐಪಿಎಲ್‌ನಂತೆಯೇ ಹರಾಜು ಪ್ರಕ್ರಿಯೆ ಕೈಗೊಂಡರೆ ಒಳ್ಳೆಯದಲ್ಲವೆ?

ಒಂದೇ ತೊಂದರೆ – ಶುದ್ಧ ಅಯೋಗ್ಯರ ಬೆಲೆ ಕಟ್ಟುವುದು ಬಹಳ ಕಷ್ಟ.

ಬಿದರಹಳ್ಳಿ ವಿಜಯ, ಹಿರೇಹಡಗಲಿ

ಸತ್ಯವನ್ನು ಅರಿತವನು ಸತ್ತಂತೆ ಇರಬೇಕಂತೆ. ಇದರ ಅರ್ಥ ತಿಳಿಸಿ?

ಅಚಲವಾಗಿರಬೇಕೆಂದು.

ಕುಮಾರ ಚಲವಾದಿ, ಹಾಸನ

ಹುಡುಗರಾಗಿದ್ದಾಗ ಹುಡುಗಿಯರನ್ನು ಚುಡಾಯಿಸಿದರೆ ರಸಿಕ ಎನ್ನುತ್ತಾರೆ. ವಯಸ್ಸಾದವರು ಚುಡಾಯಿಸಿದರೆ?

ಹಿಡಿದು ನಾಲ್ಕು ತದುಕ ಎನ್ನುತ್ತಾರೆ.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ

ಗಂಡ–ಹೆಂಡತಿಯರ ನಡುವೆ ಗುದ್ದಾಟ, ಮುದ್ದಾಟ ಎರಡೂ ಇರಬೇಕಾ?



ಅದೇ ದಾಂಪತ್ಯದ ಪಥ್ಯ – ಕಲಹವಿಲ್ಲದ ಜೋಡಿ ಸಿಹಿಯಿಲ್ಲದ ಇಕ್ಷು – ದಂಡ.

ಜಾನೆಟ್ ವತ್ಸಲ

ಎಲ್ಲ ಸುಖ ಸವಲತ್ತು ಇದ್ದಾಗ್ಯೂ ಹೆಣ್ಣಿಗೇಕೆ ಅಸಮಾಧಾನ?

ಗಂಡ ತನ್ನಷ್ಟು ಯೋಗ್ಯ/ಜಾಣನಲ್ಲ ಎಂಬ ಕೊರಗು ಇರುತ್ತದಲ್ಲ.

ಪಿ.ಜೆ. ರಾಘವೇಂದ್ರ, ಮೈಸೂರು

ವರುಣಾಸುರ ಎಂಬ ಪದವನ್ನು ಹುಟ್ಟುಹಾಕಿದ ವಾಹಿನಿಗಳನ್ನು ನ್ಯೂಸಾಸುರರು ಎನ್ನಬಹುದೆ?

ಅಸುರರಿಗಾದರೂ ಕೆಲವೊಮ್ಮೆ ಘನತೆಯಿತ್ತು. ನ್ಯೂಸುಪೀಡೆಗಳು ಎಂದರೆ ಸೂಕ್ತವಾದೀತು.

ಉಮಾ ಎಂ.ವಿ. ಬೆಂಗಳೂರು

ನೆರಳಿಗೂ ಇರುಳಿಗೂ ವ್ಯತ್ಯಾಸವೇನು ಗುರುವೆ?

ನೆರಳು ಸುಖ; ಇರುಳು ಸುಖ.

■ ರಾಮ್